**ಕರ್ನಾಟಕ ಸರ್ಕಾರ**

ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಕೆ.ಆರ್.ವೃತ್ತ,
ಬೆಂಗಳೂರು-1

**ಸಂಖ್ಯೆ: ಸಿ1(7)ಆ.ಋ.ಪ.147/2009-10** **ದಿನಾಂಕ:5-9-2017**

ಉಪನಿರ್ದೇಶಕರು[ಆಡಳಿತ], **ನೆನಪೋಲೆ-1**

ಸಾರ್ವಜನಿಕ ಶಿಕ್ಷಣ ಇಲಾಖೆ,

----------------ಜಿಲ್ಲೆ.

**ಮಾನ್ಯರೇ,**

**ವಿಷಯ:** ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ~~ವಿಭಾಗದ~~ ಚಿಂತಲಪಲ್ಲಿ ವ್ಯಾಪ್ತಿಯ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಮತ್ತು ತತ್ಸಮಾನ ಗ್ರೂಪ್-ಬಿ ವೃಂದದ ಅಧಿಕಾರಿಗಳ ಆಸ್ತಿ ಮತ್ತು ಋಣ ಪಟ್ಟಿ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುವ ಬಗ್ಗೆ.

**ಉಲ್ಲೇಖ:**.ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ/ಸೇನಿಸಿ-92 ದಿನಾಂಕ:26-04-94.

2].ಸರ್ಕಾರದ ಸುತ್ತೋಲೆ ಸಂಖ್ಯೆ: ಇ.ಡಿ 62 ಎ.ಇ.ಎ.ಆರ್ 2002 ದಿನಾಂಕ:22-7-2002.

3].ಈ ಕಛೇರಿಯ ಸುತ್ತೋಲೆ ಸಂಖ್ಯೆ: ಸಿ1(7)ಆ.ಋ.ಪ.147/2009-10 ದಿನಾಂಕ: 21-11-2002, 30-10-2003, 30-03-2004, 10-05-2007 26-04-2008, 06-08-2008. 02-08-2011, ಮತ್ತು ದಿನಾಂಕ:3-4-14

4] ಈ ಕಛೇರಿಯ ಸುತ್ತೋಲೆ ಸಂಖ್ಯೆ: ಸಿ1(7)ಆ.ಋ.ಪ.147/2009-10 ದಿನಾಂಕ: 10/01/2017,

-&&&&-

ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 1966ರ ಉಪ ನಿಯಮ 22ರ ಪ್ರಕಾರ ಎಲ್ಲಾ ಸರ್ಕಾರಿ ನೌಕರರು ಮೊದಲು ಸೇವೆಗೆ ಸೇರಿದಾಗ ಮತ್ತು ಪ್ರತಿ ವರ್ಷ ಮಾರ್ಚ್ 31ರಲ್ಲಿದ್ದಂತೆ ಅಧಿಕಾರಿಗಳ ಮತ್ತು ಕುಟುಂಬದ ಸದಸ್ಯರ ಹೆಸರಿನಲ್ಲಿರುವ ಚರ ಸ್ಥಿರಾಸ್ತಿಗಳ ವಿವರಗಳನ್ನು ನಿಗಧಿತ ನಮೂನೆಯಲ್ಲಿ ನಮೂದಿಸಿ ಸಂಬಂಧಿಸಿದ ಪ್ರಾಧಿಕಾರಿಗಳಿಗೆ ಸಲ್ಲಿಸುವುದು ಕಡ್ಡಾಯವಾಗಿದೆ ಎಂದು ಉಲ್ಲೇಖಿತ ಸುತ್ತೋಲೆಗಳಲ್ಲಿ ಈಗಾಗಲೇ ತಿಳಿಸಲಾಗಿದೆ ಅದರೂ ಕೂಡ ನಿಮ್ಮ ಜಿಲ್ಲೆಯಿಂದ ಅನೇಕ ಗ್ರೂಪ್ ಎ ಗ್ರೂಪ್ ಬಿ ಅಧಿಕಾರಿಗಳ ಆಸ್ತಿ ಮತ್ತು ಋಣ ಪಟ್ಟಿಗಳನ್ನು ಘೋಷಿಸಿಕೊಂಡ ಬಗ್ಗೆ ಇದುವರೆವಿಗೂ ಈ ಕಛೇರಿಯಲ್ಲಿ ಸ್ವೀಕೃತಿಯಾಗಿರುವುದಿಲ್ಲ.

ಮೇಲ್ಕಂಡ ವಿಷಯವನ್ನು ಗಂಬೀರವಾಗಿ ಪರಿಗಣಿಸಿದ್ದು **ದಿನಾಂಕ 28/9/2017** ರ ವರೆಗೆ ಅಂತಿಮ ಗಡುವನ್ನು ನೀಡಿದೆ. ಸಂಬಂಧಪಟ್ಟ ಉಪನಿರ್ದೇಶಕರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ಈ ಬಗ್ಗೆ ವಯಕ್ತಿಕ ಗಮನ ಹರಿಸಿ ತಮ್ಮ ಜಿಲ್ಲೆ ಮತ್ತು ತಾಲ್ಲೂಕಿನ ವ್ಯಾಪ್ತಿಯೊಳಗೆ ಬರುವ ಎಲ್ಲಾ ಗ್ರೂಪ್' ಎ' ಗ್ರೂಪ್' ಬಿ' ಅಧಿಕಾರಿಗಳ ಅಸ್ತಿ ಮತ್ತು ಋಣ ಪಟ್ಟಿಯನ್ನು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರಕ್ಕೆ ಅಂಕಿ ಅಂಶಗಳೊಂದಿಗೆ ಸಲ್ಲಿಸುವುದು. ತಪ್ಪಿದಲ್ಲಿ ನಿಮ್ಮ ಆಕ್ಟೋಬರ 2017 ರ ಮಾಹೆಯ ವೇತನವನ್ನು ತಡೆಯಿಡಿಯಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಿ ಕ್ರಮವಹಿಸಲಾಗುವುದು ಎಂದು ತಿಳಿಸಿದೆ.

**[ಎಸ್.ಕಾತ್ಯಾಯಿನಿ ದೇವಿ]**
**ಜಂಟಿ ನಿರ್ದೇಶಕರು[ಆಡಳಿತ]**

**ಇವರಿಗೆ ಕಳುಹಿಸುತ್ತಾ, ತಮ್ಮ ತಮ್ಮ ವ್ಯಾಪ್ತಿಯಲ್ಲಿನ ಎಲ್ಲಾ ಸಂಬಂಧ ಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಲು ಕೋರುತ್ತಾ.**

1. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರು ರವರುಗಳಿಗೆ ಅಗತ್ಯ ಕ್ರಮಕ್ಕಾಗಿ
2. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹ ನಿರ್ದೇಶಕರು ಹಾಗೂ ಸಿ.ಟಿ.ಇ.ಗಳಲ್ಲಿನ ಪ್ರಾಂಶುಪಾಲರುಗಳಿಗೆ ಅಗತ್ಯ ಕ್ರಮಕ್ಕಾಗಿ.
3. ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ~~ವಿಭಾಗದ~~ ಚಿಂತಲಪಲ್ಲಿ ~~ಎಲ್ಲಾ ಜಿಲ್ಲಾ~~ ಉಪ ನಿರ್ದೇಶಕರು(ಆಡಳಿತ) ಅಗತ್ಯ ಕ್ರಮಕ್ಕಾಗಿ.
4. ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ~~ವಿಭಾಗದ~~ ಚಿಂತಲಪಲ್ಲಿ ಎಲ್ಲಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಮಾಹಿತಿಯನ್ನು ಕ್ರೂಡೀಕರಿಸಿ ಉಪನಿರ್ದೇಶಕರಿಗೆ ಸಲ್ಲಿಸಲು ತಿಳಿಸಿದೆ.
5. ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ~~ವಿಭಾಗದ~~ ಚಿಂತಲಪಲ್ಲಿ ಎಲ್ಲಾ ಡಯಟ್ ಪ್ರಾಂಶುಪಾಲರಿಗೆ ತಮ್ಮ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ಮೇಲ್ಕಂಡ ಮಾಹಿತಿಯನ್ನು ನಿರ್ದೇಶಕರು, ಡಿ.ಎಸ್.ಇ.ಆರ್.ರವರ ಮೂಲಕ ಸಲ್ಲಿಸಲು ತಿಳಿಸಿದೆ.

**ಮಾಹಿತಿಗಾಗಿ:**

1. ಬೆಂಗಳೂರ ವಿಭಾಗದ ಎಲ್ಲಾ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ ---------------------------- ರವರಿಗೆ ಅಗತ್ಯ ಕ್ರಮಕ್ಕಾಗಿ.
2. ಬೆಂಗಳೂರ ವಿಭಾಗದ ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳಿಗೆ ---------------------------------------------------- ಅಗತ್ಯ ಕ್ರಮಕ್ಕಾಗಿ .3]ಕಛೇರಿ ಪ್ರತಿ.